# ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿ | ಪ್ರತಿವಾದಿ |
|---|---|
| 1 ಪರಗಿ ಶಾರದಮ್ಮ ಗಂಡ ಕಾಳಪ್ಪ<br>2 ಪರಗಿ ವಿಶ್ವನಾಥಪ್ಪ ತಂದೆ ಶಿವರಾಮಪ್ಪ | ಕಂದಾಯ ನಿರೀಕ್ಷಕರು<br>ಮರಿಯಮ್ಮನಹಳ್ಳಿ |

**ಪೀಠಿಕೆ:-**

ಹೊಸಪೇಟೆ ತಾಲೂಕಿನ ಹೊಸಕೋಟೆ ಗ್ರಾಮದ ಸ ನಂ 59, ವಿ. 1.06 ಎಕ್ರೆ. ಸ.ನಂ 61/ಬಿ ವಿ 0.90 ಸೆಂ. ಜಮೀನುಗಳ ಪಹಣಿಗಳಲ್ಲಿ ನಮೂದಾಗಿರುವ ಮೈನರ ಗಾರ್ಡಿಯನ್ ತೆಗೆಯಲು ಶ್ರೀ ಪರಗಿ ವಿಶ್ವನಾಥಪ್ಪ ತಂದೆ ಶಿವರಾಮಪ್ಪ ಇವರು ಅರ್ಜಿ ಸಲ್ಲಿಸಿರುತ್ತಾರೆ. ಹಕ್ಕು ಬದಲಾವಣೆ ಸಂಖ್ಯೆ ಹೆಚ್ 2/2015-16 ರ ದಿನಾಂಕ 27-1-2016 ರಂದು ಚೆಕಲಿಸ್ಟ ಮತ್ತು ನಮೂನೆ 21 ತಯಾರಾಗಿದ್ದು ಲಗತ್ತು ಮತ್ತು ಅಗತ್ಯ ದಾಖಲೆಗಳ ವಿವರಗಳ ಹಕ್ಕು ಬದಲಾವಣೆ ವಿವರಗಳೊಂದಿಗೆ ಹಕ್ಕು ಬದಲಾವಣೆ ಪ್ರಕರಣವನ್ನು ಕಂದಾಯ ನಿರೀಕ್ಷಕರು ಕಮಲಾಪುರ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿತ್ತು.

ಹಕ್ಕು ಬದಲಾವಣೆ ಆದೇಶದಲ್ಲಿ ನಮೂನೆ 21 ರ ನೋಟಿಸಿಗೆ ಆಸಕ್ತರಿಗೆ ಸಹಿ ಮಾಡಿರುತ್ತಾರೆ. ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ ಆದರೆ ಚಾಲ್ತಿ ಪಹಣಿಗಳಲ್ಲಿ ವಾದಿಗಳ ಇಬ್ಬರ ಹೆಸರುಗಳಿದ್ದು ಚೆಕ್‌ಲೀಸ್ಟ್-ನಮೂನೆ-12, ನಮೂನೆ-21 ಗಳಲ್ಲಿ ಹಕ್ಕು ಬದಲಾವಣೆ ಪಡೆಯುವವರ ವಿವರಗಳಲ್ಲಿ ಕೇವಲ ಪರಗಿ ವಿಶ್ವನಾಥಪ್ಪ ತಂದೆ ಶಿವರಾಮಪ್ಪ ಇವರ ಹೆಸರು ಮಾತ್ರ ನಮೂದಿಸಿರುವುದು ತಪ್ಪಾಗಿರುವುದು ಕಂಡು ಬಂದ ಕಾರಣ ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ ಇವರು ಹಕ್ಕು ಬದಲಾವಣೆಯನ್ನು ತಿರಸ್ಕರಿಸಿ ಮುಂದಿನ ವಿಚಾರಣೆಗೆ ತಹಶೀಲ್ದಾರರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 09-06-2016 ರಂದು ಪ್ರಾರಂಬಿಸಿ ದಿನಾಂಕ 9-6-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿಗಳು ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ. ವಾದಿಗಳಿಬ್ಬರೂ ಶ್ರೀ ಪರಗಿ ವಿಶ್ವನಾಥಪ್ಪ ತಂದೆ ಶಿವರಾಮಪ್ಪ ಇವರ ವಯಸ್ಸಿನ ಬಗ್ಗೆ ಸೂಕ್ತ ದಾಖಲೆ ಸಲ್ಲಿಸಿರುತ್ತಾರೆ. ಹಾಗೂ ಅವರ ಕೋರಿಕೆಯಂತೆ ಕೇವಲ ಮೈನರ್ ಗಾರ್ಡಿಯನ್ ಮಾತ್ರ ತೆಗೆದು ಹಕ್ಕುಬದಲಾವಣೆ ಮಾಡವಂತೆ ಹೇಳಿಕೆ ನೀಡಿರುತ್ತಾರೆ. ಕಾರಣ ಈ ಕೆಳಗಿನಂತೆ.

**ಸಂ/ಕಂ/ಪಹಣಿ/ವಿವಾದ/ 11 /2016-17** **ದಿನಾಂಕ:- 1-9-2016**

## ಆದೇಶ

ಪ್ರಕರಣದ ಹಿನ್ನಲೆ ವಾಸ್ತವಂಶ ಹಾಗೂ ದಾಖಲೆಗಳನ್ವಯ ಹೊಸಪೇಟೆ ತಾಲೂಕಿನ ಹೊಸಕೋಟೆ ಗ್ರಾಮದ ಸ ನಂ 59, ವಿ. 1.06 ಎಕ್ರೆ. ಸ.ನಂ 61/ಬಿ ವಿ 0.90 ಸೆಂ. ಜಮೀನುಗಳಲ್ಲಿ ಶ್ರೀ ಪರಗಿ ವಿಶ್ವನಾಥಪ್ಪ ತಂದೆ ಶಿವರಾಮಪ್ಪ ಇವರ ಕೋರಿಕೆಯಂತೆ ಕೇವಲ ಮೈನರ್ ಗಾರ್ಡಿಯನ್ ಮಾತ್ರ ತೆಗೆದು ಶ್ರೀಮತಿ ಪರಗಿ ಶಾರದಮ್ಮ ಇವರೊಂದಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 1-9-2016 ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು, ಹೊಸಪೇಟೆ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಮತ್ತು ಭೂಮಿ ಕೇಂದ್ರ